ಮಂಗಾಲ್ಯ ಭಾಗ್ಯ ಫಲಾನುಭವಿಗಳಿಗೆ ಹಣ ದೊರಕದಿರುವುದು

268 (462) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಮಾಂಗಲ್ಯ ಭಾಗ್ಯ ಯೋಜನೆಯಲ್ಲಿ ಹಣ ಇಲ್ಲದೆ 61 ಫಲಾನುಭವಿಗಳಿಗೆ ಮಂಜೂರಾತಿ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? (ತಲಾ ರೂ 5000-00)

ಆ) ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ

ಆ) ಪ್ರಸಕ್ತ ಸಾಲಿನಲ್ಲಿ ಮಾಂಗಲ್ಯಭಾಗ್ಯ ಯೋಜನೆ ಯಡಿಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ 69 ಅರ್ಜಿಗಳ ಪೈಕಿ 24 ಫಲಾನುಭವಿಗಳಿಗೆ ತಲಾ ರೂ. 5,000-00ಗಳಂತೆ ಸಹಾಯಧನ ಮಂಜೂರು ಮಾಡಲಾಗಿದೆ. ಉಳಿದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು.

ಹುಬ್ಬಳ್ಳಿ- ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಈಜುಕೊಳ ನಿರ್ಮಿಸುವ ಕುರಿತು

269 (226) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ ಹುಬ್ಬಳ್ಳಿ :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಾಷ್ಟ್ರಮಟ್ಟದ ಈಜುಕೊಳ ಇರಲಾರದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ।

ಆ) ಬಂದಿದ್ದಲ್ಲಿ ಕೈಗೊಂಡ ಕ್ರಮವೇನು?

ಇ) ಸದರಿ ಈಜುಕೊಳ ಪ್ರಾರಂಭಿಸಲಿಕ್ಕೆ ಎಷ್ಟು ಎಕರೆ ಭೂಮಿ ಕಾಯ್ದಿರಿಸಲಾಗಿದೆ ?

ಈ) ಸದರಿ ಕೆಲಸಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ.?

ಉ) ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಹುಬ್ಬಳ್ಳಿ- ಧಾರವಾಡ ಅವಳಿ ನಗರಗಳಲ್ಲಿ ಎರಡು ಈಜು ಕೊಳಗಳಿದ್ದು ಒಂದು ಧಾರವಾಡದಲ್ಲಿ ಹಾಗೂ ಇನ್ನೊಂದು ಹುಬ್ಬಳ್ಳಿಯಲ್ಲಿದೆ. ಹುಬ್ಬಳ್ಳಿಯಲ್ಲಿರುವ ಈಜು ಕೊಳವನ್ನು ಯುವಜನ ಹಾಗೂ ಕ್ರೀಡಾ ಪ್ರಾಧಿಕಾರಕ್ಕೆ ವಹಿಸಲಾಗಿದೆ. ಆದರೂ ರಾಷ್ಟ್ರ ಮಟ್ಟದ ಈಜು ಕೊಳವನ್ನು ಮಾಡುವ ಬಗ್ಗೆ ಪರಿಶೀಲಿಸಲು ಹುಬ್ಬಳ್ಳಿ-ಧಾರವಾಡ ಪ್ರಾಧಿಕಾರಕ್ಕೆ 5 ಎಕರೆಗಳ ಜಮೀನನ್ನು ನೀಡಲು ಕೋರಲಾಗಿದೆ. ಆದರೆ ಇದಕ್ಕಾಗಿ ಹಣವನ್ನು ಮೀಸಲಾಗಿ ಇಟ್ಟಿಲ್ಲ.